**ಸಿಬ್ಬಂದಿ ನೇಮಕಾತಿ ಆಯೋಗ (ಕರ್ನಾಟಕ ಕೇರಳ ಪ್ರದೇಶ, ಭಾರತ ಸರ್ಕಾರ), ಬೆಂಗಳೂರು**

**ಕೇಂದ್ರ ಸಶಸ್ತ್ರ ಪೊಲೀಸ್ (CAPF) ಮತ್ತು SSF ಪಡೆಗಳಲ್ಲಿ ಕಾನ್ಸ್ಟೆಬಲ್ (GD), ಮತ್ತು ಅಸ್ಸಾಂ ರೈಫಲ್ಸ್ ನಲ್ಲಿ ರೈಫಲ್ ಮ್ಯಾನ್ (GD), ಮತ್ತು ನಾರ್ಕೋಟಿಕ್ಸ್ ಕಂಟ್ರೋಲ್ ಬ್ಯೂರೋನಲ್ಲಿ ಸಿಪಾಯಿ ಹುದ್ದೆಗಳ ನೇಮಕಾತಿಗಾಗಿ ಸ್ಪರ್ಧಾತ್ಮಕ ಪರೀಕ್ಷೆಯ ಪ್ರಕಟಣೆ – 2022**

**ಕೇಂದ್ರ ಸರ್ಕಾರದ ಸಿಬ್ಬಂದಿ ನೇಮಕಾತಿ ಆಯೋಗವು ಮೇಲ್ಕಂಡ ಹುದ್ದೆಗಳ ನೇಮಕಾತಿಗಾಗಿ ಮುಕ್ತ ಸ್ಪರ್ಧಾತ್ಮಕ ಕಂಪ್ಯೂಟರ್ ಆಧಾರಿತ ಪರೀಕ್ಷೆಯನ್ನು ನಡೆಸುತ್ತಿದೆ. ಪರೀಕ್ಷೆಯು ಜನವರಿ, 2023 ರಲ್ಲಿ ನಡೆಯಲಿದೆ. ಪರೀಕ್ಷೆಯ ನಿಖರ ದಿನಾಂಕವನ್ನು ನಂತರ SSC ವೆಬ್‌ಸೈಟ್ ಮೂಲಕ ತಿಳಿಸಲಾಗುವುದು. ವಿವರಗಳು ವೆಬ್‌ಸೈಟ್ www.ssckkr.kar.nic.in ಮತ್ತು https://ssc.nic.in ನಲ್ಲಿ ಲಭ್ಯವಿದೆ.**

| | | |
|---|---|---|
| 1) | ವೇತನ ಶ್ರೇಣಿ | **ಲೆವೆಲ್ - 1 (ರೂ.18,000 – ರೂ.56,900), ಲೆವೆಲ್ – 3 (ರೂ.21,700 - ರೂ.69,100)** |
| 2) | ವಯೋಮಿತಿ | 01.01.2023 ರಂತೆ ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ 18 ರಿಂದ 23 ವರ್ಷಗಳು.<br>**ಗಮನಿಸಿ:** ಕೋವಿಡ್ ಪರಿಸ್ಥಿತಿಯ ಕಾರಣಕ್ಕಾಗಿ ಮೇಲೆ ನಮೂದಿಸಿರುವ ಗರಿಷ್ಠ ವಯೋಮಿತಿಗೆ **ಮೂರು ವರ್ಷಗಳ ಸಡಲಿಕೆ** ನೀಡಲಾಗಿದೆ. ಈ ಸಡಿಲಿಕೆಯು ಸದರಿ ಪರೀಕ್ಷೆಗೆ ಮಾತ್ರ ಅನ್ವಯಿಸುತ್ತದೆ. ಈ ಮೂರು ವರ್ಷಗಳ ಗರಿಷ್ಠ ವಯೋಮಿತಿ ಸಡಿಲಿಕೆಯು ಎಲ್ಲಾ ವರ್ಗದ ಅಭ್ಯರ್ಥಿಗಳಿಗೆ ಲಭ್ಯವಿದೆ.<br>OBC/SC/ST/ESM/ಇತರ ನಿರ್ದಿಷ್ಟ ವರ್ಗಗಳಿಗೆ ವಯೋಮಿತಿ ಸಡಿಲಿಕೆಗಾಗಿ ಅಧಿಸೂಚನೆಯ ಪ್ಯಾರಾ-5.1 ಅನ್ನು ನೋಡಿ. |
| 3) | ವಿದ್ಯಾರ್ಹತೆ | ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ 10 ನೇ ತರಗತಿ ಪರೀಕ್ಷೆಯಲ್ಲಿ (SSLC) ಉತ್ತೀರ್ಣರಾಗಿರಬೇಕು. |
| 4) | ನೇಮಕಾತಿ ವಿಧಾನ | ಕಂಪ್ಯೂಟರ್ ಆಧಾರಿತ ಪರೀಕ್ಷೆಯ ವಿವರಗಳಿಗಾಗಿ ದಯವಿಟ್ಟು ಅಧಿಸೂಚನೆಯ ಪ್ಯಾರಾ-11 & 12 ಅನ್ನು ನೋಡಿ.<br>ಗಮನಿಸಿ: NCC ಪ್ರಮಾಣಪತ್ರ ಹೊಂದಿರುವವರಿಗೆ ಹೆಚ್ಚುವರಿ ಅಂಕಗಳನ್ನು ನೀಡಲಾಗುವುದು:<br>NCC 'C' ಪ್ರಮಾಣಪತ್ರ: 5% ಹೆಚ್ಚುವರಿ ಅಂಕಗಳು.<br>NCC 'B' ಪ್ರಮಾಣಪತ್ರ: 3% ಹೆಚ್ಚುವರಿ ಅಂಕಗಳು.<br>NCC 'A' ಪ್ರಮಾಣಪತ್ರ: 2% ಹೆಚ್ಚುವರಿ ಅಂಕಗಳು. |
| 5) | ಹುದ್ದೆಗಳ ಸಂಖ್ಯೆ | 24,369 |
| 6) | ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಲಿಂಕ್ | https://ssc.nic.in (SSC ನೇಮಕಾತಿ ಪ್ರಕಟಣೆ ದಿನಾಂಕ 27/10/2022) |
| 7) | ಶುಲ್ಕ | ರೂ.100/- (ಮಹಿಳೆ/SC/ST/EXS ಅಭ್ಯರ್ಥಿಗಳಿಗೆ ಯಾವುದೇ ಶುಲ್ಕವಿಲ್ಲ) |
| 8) | ಆನ್‌ಲೈನ್ ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ | 30/11/2022 (23.00 ಗಂಟೆಯವರೆಗೆ)<br>(ಆನ್‌ಲೈನ್ ಅರ್ಜಿಗಳನ್ನು ಮಾತ್ರ ಸ್ವೀಕರಿಸಲಾಗುತ್ತದೆ) |
| 9) | ಸಹಾಯಕ್ಕಾಗಿ ಸಹಾಯವಾಣಿಗಳು | 080-25502520, 9483862020<br>(ಸೋಮವಾರದಿಂದ ಶುಕ್ರವಾರದವರೆಗೆ - 10.00 ರಿಂದ 17.00 ಗಂಟೆಗಳವರೆಗೆ) |
| 10) | ಅರ್ಜಿ ಸಲ್ಲಿಸುವುದು ಹೇಗೆ ಮತ್ತು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಲಿಂಕ್ | SSC ಪ್ರಧಾನ ಕಛೇರಿಯ ಅಧಿಕೃತ ವೆಬ್‌ಸೈಟ್ ಅಂದರೆ https://ssc.nic.in ನಲ್ಲಿ ಆನ್‌ಲೈನ್ ರೀತಿಯಲ್ಲಿ ಮಾತ್ರ ಅರ್ಜಿಗಳನ್ನು ಸಲ್ಲಿಸಬಹುದು. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ವಿವರವಾದ ಸೂಚನೆಗಳಿಗಾಗಿ, ಅಧಿಸೂಚನೆಯ ಅನುಬಂಧ-I ಮತ್ತು ಅನುಬಂಧ-II ಅನ್ನು ನೋಡಿ. |
| 11) | ಅಭ್ಯರ್ಥಿಗಳು ನಿಯಮಿತವಾಗಿ ಈ ವೆಬ್‌ಸೈಟ್‌ಗಳಿಗೆ ಭೇಟಿ ನೀಡಲು ಸೂಚಿಸಲಾಗಿದೆ: SSC ಮುಖ್ಯ ಕಛೇರಿ ನವದೆಹಲಿಯ ವೆಬ್‌ಸೈಟ್ https://ssc.nic.in ಮತ್ತು SSC ಕರ್ನಾಟಕ-ಕೇರಳ ಪ್ರದೇಶದ ವೆಬ್‌ಸೈಟ್ www.ssckkr.kar.nic.in | |

* * * * *